**ಸಾಕ್ಷಿಯನ್ನು ದಿನಾಂಕಃ04.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ವಾದಿ ಪರ ಶ್ರೀ ಪಿ ಹೆಚ್ ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ನನ್ನ ತಾಯಿಯ ವಿರುದ್ಧ ಮದ್ದೂರು ನ್ಯಾಯಾಲಯದಲ್ಲಿ ಕೇಸ್ ಹಾಕಿದ್ದೆ ಎಂದರೆ ಸರಿ. ಆಗ ನಾನು ಕೌಡ್ಲೆ ಗ್ರಾಮದಲ್ಲಿರುವ ಆಸ್ತಿಗಳನ್ನು ಮಾತ್ರ ಸೇರಿಸಿ ಅವರ ವಿರುದ್ಧ ಶಾಶ್ವತ ತಡೆಯಾಜ್ಞೆ ಆದೇಶ ಕೋರಿದ್ದೆ ಎಂದರೆ ಸರಿ. ಆ ದಾವೆಯಲ್ಲಿ ನಾನು ಸೋಮನಹಳ್ಳಿಯ ಆಸ್ತಿಗಳನ್ನು ಸೇರಿಸಿರಲಿಲ್ಲ ಎಂದರೆ ಸರಿ. ಆ ಕೇಸ್ನಲ್ಲಿ ಈ ದಾವೆಯ ವಾದಿಯರು ತಮ್ಮನ್ನು ಪಕ್ಷಗಾರರನ್ನಾಗಿ ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಕೇಸ್ ನ ವಿಚಾರಣೆಯ ಕಾಲದಲ್ಲಿ ನಾನು ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಲ್ಲಿ ಈ ದಾವೆಯ ವಾದಿಯರಿಗೆ ಹಕ್ಕು ಇದೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ನಾನು ಸ್ವಯಾರ್ಜಿತವಾಗಿ ಯಾವ ಆಸ್ತಿಯನ್ನೂ ಸಂಪಾದನೆ ಮಾಡಿಲ್ಲ ಎಂದರೆ ಸರಿ.

2. ನಮ್ಮ ತಂದೆ ಬದುಕಿರುವಾಗಲೇ ವಿಭಾಗ ಮಾಡಿದ್ದಾರೆ ಎಂಬ ಬಗ್ಗೆ ದಾಖಲೆ ಇಲ್ಲ. ನನ್ನ ತಂದೆ ದಿಃ14.01.1979 ರಂದು ಮೃತ ಪಟ್ಟಿರುತ್ತಾರೆ. ಕೌಡ್ಲೆ ಗ್ರಾಮದಲ್ಲಿ ಇರುವ ಆಸ್ತಿಗಳನ್ನು ನಾನು ನನ್ನ ಮಕ್ಕಳ ಹೆಸರಿಗೆ ಖಾತೆ ಮಾಡಿಸಿದ್ದೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ಹೆಸರಿಗೆ ಯಾವ ಯಾವ ಆಸ್ತಿಯನ್ನು ಖಾತೆ ಮಾಡಿಸಿದ್ದೇನೆ ಎಂದು ಹೇಳಲು ನನಗೆ

ಸಾಧ್ಯವಿಲ್ಲ, ಆ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ದಾವಾ ಬಿ ಷೆಡ್ಯೂಲ್ ಐಟಂ ನಂಬರ್ 1 ರಿಂದ 11 ರ ಆಸ್ತಿಗಳನ್ನು ನಾನು ನನ್ನ ಮಕ್ಕಳ ಹೆಸರಿಗೆ ಖಾತೆ ಮಾಡಿಸಿದ್ದೇನೆ ಎಂದರೆ ಕೆಲವೊಂದು ಆಸ್ತಿಗಳಲ್ಲಿ ನನ್ನ ಚಿಕ್ಕಪ್ಪನಿಗೆ ಸಹ ಸೇರಿದ ಆಸ್ತಿಗಳು ಇದ್ದು, ನಿರ್ದಿಷ್ಟವಾಗಿ ಇಂತಹ ಆಸ್ತಿಗಳು ಎಂದು ಹೇಳಲು ನನಗೆ ಸಾಧ್ಯವಿಲ್ಲ. ಆ ಜಮೀನುಗಳನ್ನು ನಾನು ನನ್ನ ಸಹೋದರಿಯರಿಗೆ ಭಾಗ ಕೊಡಬಾರದು ಎಂಬ ಕಾರಣಕ್ಕಾಗಿ ನನ್ನ ಮಕ್ಕಳ ಹೆಸರಿಗೆ ಖಾತೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

3. 1 ನೇ ವಾದಿಗೆ ನನ್ನ ತಂದೆ ವಿಭಾಗ ಮಾಡಿಕೊಟ್ಟಿದ್ದ ಬಗ್ಗೆ 1 ನೇ ವಾದಿಯ ಹೆಸರಿಗೆ ಖಾತೆ ಆಗಿತ್ತು. ನನ್ನ ತಾಯಿಯ ವಿರುದ್ದ ನಾನು ಕೇಸ್ ಹಾಕಿದಾಗ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಆ ಕೇಸ್ ವಜಾ ಆಯಿತು ಎಂದರೆ ಸರಿ. ನಾನು ವಾದಿಯರಿಗೆ ಯಾವುದೇ ಭಾಗ ಕೊಟ್ಟಿರಲಿಲ್ಲ, ವಾದಿಯರು ಈ ಕೇಸನ್ನು ಹಾಕಿದ ನಂತರ 1 ನೇ ವಾದಿಯ ಜೊತೆ ಮಾತುಕತೆ ಮಾಡಿಕೊಂಡು ಅವರೊಂದಿಗೆ ನಾನು ರಾಜಿ ಮಾಡಿಕೊಂಡು ಆಸ್ತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರೇ ರಾಜಿ ಮಾಡಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. 2 ನೇ ವಾದಿಗೆ 1/3 ನೇ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. 1 ನೇ ವಾದಿಯು ನನ್ನ ವಿರುದ್ದ ಅಸಲು ದಾವಾ ನಂಬರ್ 447/2011 ರಲ್ಲಿ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸರಿಯಲ್ಲ. ನಾನು ಸಾಧ್ಯವಾದರೆ 2 ನೇ ವಾದಿಯ ಭಾಗವನ್ನು ತಪ್ಪಿಸಬೇಕೆಂದು ನಾನು ನನ್ನ

ಮಕ್ಕಳ ಹೆಸರಿಗೆ ಆಸ್ತಿಯನ್ನು ಖಾತೆ ಮಾಡಿಸಿದ್ದೆ ಎಂದರೆ ಸರಿಯಲ್ಲ. ನಾನು ಅಸಲು ದಾವಾ ನಂಬರ್ 449/2011 ರ ದಾವೆಯನ್ನು ನನ್ನ ತಾಯಿ ಆಸ್ತಿಗಳನ್ನು ಮಾರಾಟ ಮಾಡುತ್ತಾರೆ ಎಂಬ ಕಾರಣಕ್ಕೆ ಮತ್ತು ನನ್ನ ಹೆಸರಿಗೆ ಖಾತೆ ಆಗಬೇಕೆಂಬ ಉದ್ದೇಶದಿಂದ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ತನ್ನ ಸಹೋದರಿಯರು ತನ್ನ ತಾಯಿಯನ್ನು ಕರೆದುಕೊಂಡು ಹೋಗಿ ಆಸ್ತಿಯನ್ನು ಬರೆಸಿಕೊಳ್ಳುವ ಪ್ರಯತ್ನದಲ್ಲಿ ಇದ್ದಿದ್ದರಿಂದ ಆ ದಾವೆ ಸಲ್ಲಿಸಿದ್ದೆ ಎಂದು ನುಡಿದಿರುತ್ತಾರೆ. ನನ್ನ ತಾಯಿಯ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ವಾದಿಗೆ ಚಿನ್ನದ ರೂಪದಲ್ಲಿ ಅವರ ಭಾಗಾಂಶ ಕೊಟ್ಟಿದ್ದೇನೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಎಂ ಆರ್ ನಂಬರ್ 22/1998-99 ರಂತೆ ನನ್ನ ಮಕ್ಕಳ ಹೆಸರಿಗೆ ಖಾತೆ ಆಗಿರುವುದು ಸುಳ್ಳು ಖಾತೆ ಎಂದರೆ ಸರಿಯಲ್ಲ. ನಾನು 2 ನೇ ವಾದಿಗೆ ಭಾಗಾಂಶ ಕೊಡಬಾರದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.